# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 990 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24.07.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕಂದಾಯ ಇಲಾಖೆಯ ವಿವಿಧ ಅಧಿಕಾರಿಗಳ ಹಂತದಲ್ಲಿ ಕಂದಾಯ ನ್ಯಾಯಾಲಯಗಳಲ್ಲಿ ಸುಮಾರು 50,000ಕ್ಕೂ ಹೆಚ್ಚು ಪ್ರಕರಣಗಳು ಬಾಕಿಯಿದ್ದು ಅವುಗಳನ್ನು ವಿಲೇವಾರಿ ಮಾಡಲು ಸರಕಾರ ಏನು ಕ್ರಮವಹಿಸಿದ ವಿವರ ನೀಡುವುದು.</td><td>ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 193 ಟಿಆರ್‌ಎಂ 2019, ದಿನಾಂಕ:18-02-2021 ರಂತೆ ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಇತ್ಯರ್ಥ ಪಡಿಸಬೇಕಾಗುತ್ತದೆ. ಜಿಲ್ಲಾಧಿಕಾರಿ ಮತ್ತು ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದ ದಿನಾಂಕದಿಂದ 6 ತಿಂಗಳೊಳಗಾಗಿ ಇತ್ಯರ್ಥಪಡಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ಸದರಿ ಸುತ್ತೋಲೆಯ ನಿರ್ದೇಶನದನ್ವಯ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>(ಆ)</td><td>ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ, ಕಾರ್ಯಕ್ರಮಗಳಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳೆಷ್ಟು ವಿವಿಧ ಇಲಾಖೆಗಳ ಅರ್ಜಿಗಳೆಷ್ಟು ಏಕರೂಪದ ಅರ್ಜಿಗಳನ್ನು ಪರಿಶೀಲಿಸಿ ಅವುಗಳನ್ನು ಪರಿಹರಿಸಿದೆಯೇ ವಿವರ ನೀಡುವುದು;</td><td>ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳಲ್ಲಿ ಸ್ವೀಕೃತವಾದ ಅರ್ಜಿಗಳು, ವಿಲೇವಾರಿಗೊಳಿಸಲಾದ ಹಾಗೂ ಬಾಕಿ ಇರುವ ಅರ್ಜಿಗಳ ವಿವರಗಳು ಈ ಕೆಳಗಿನಂತಿರುತ್ತವೆ:-<br><table><tr><th>ಜಿಲ್ಲೆ</th><th>ಸ್ವೀಕೃತವಾದ ಅರ್ಜಿಗಳು</th><th>ವಿಲೇವಾರಿಯಾದ ಅರ್ಜಿಗಳು</th><th>ಬಾಕಿ ಇರುವ ಅರ್ಜಿಗಳು</th></tr><tr><td>ದಕ್ಷಿಣ ಕನ್ನಡ</td><td>1116</td><td>894</td><td>222</td></tr><tr><td>ಉಡುಪಿ</td><td>1051</td><td>739</td><td>312</td></tr></table></td></tr>
<tr><td>(ಇ)</td><td>ಕರಾವಳಿ ಜಿಲ್ಲೆಗಳಲ್ಲಿ ಭೂ ಪರಿವರ್ತನೆ ಮಾಡುವಾಗ ಉದ್ಭವಿಸುವ ಸಮಸ್ಯೆಗಳಾದ ಖಾಸಗಿ ಸಂಪರ್ಕ ರಸ್ತೆ, ರಸ್ತೆ ಅಂಚು, ಸಿಆರ್‌ಝಡ್ ಮತ್ತು ವಿವಿಧ ವಲಯಗಳು, ಆರ್‌ಆರ್‌ಟಿಸಿಆರ್ ಹೊಂದಾಣಿಕೆಯಿಲ್ಲದ ಪ್ರಕರಣಗಳು, ಮೂಲ ಕಡತ ಇಲ್ಲ ಎಂದು ಭೂಪರಿವರ್ತನೆ ತಿರಸ್ಕರಿಸುವುದು, ಭೂ ಪರಿವರ್ತನೆಯನ್ನು ಪಹಣಿಯಲ್ಲಿ ದಾಖಲಿಸದಿರುವುದು, 1-5 ದರ್ಖಾಸ್ತು ಪ್ಲಾಟಿಂಗ್ ಆಗದಿರುವುದು, ಜಾಗ ವಿಭಜನೆಯ ಪೋಡಿ ಆಗದಿರುವುದು, ಭೂ ಪರಿವರ್ತನೆಯಲ್ಲಿ ಅಗತ್ಯ ವಿಧಗಳು ಇಲ್ಲದಿರುವುದು, ಮೂಲಗೇಣಿ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿದ್ದು ಇವುಗಳನ್ನು</td><td><ul><li>ಕಂದಾಯ ಇಲಾಖೆಯ ಭೂಪರಿವರ್ತನೆಗೆ ಭೂ ಕಂದಾಯ ಅಧಿನಿಯಮ, 1964ರ ಕಲಂ 95(2) ರಂತೆ ಕ್ರಮಗಳನ್ನು ಅನುಸರಿಸುತ್ತಿದ್ದು, ಪ್ರಸ್ತುತ ಭೂಸುಧಾರಣಾ ಕಾಯ್ದೆಯಡಿ ಮಂಜೂರಾದ ಜಮೀನುಗಳ ಭೂಪರಿವರ್ತನೆಯನ್ನು ಜಿಲ್ಲಾಧಿಕಾರಿ ಯವರ ಹಂತದಲ್ಲಿ ಹಾಗೂ ಪಟ್ಟಾ ಜಮೀನಿನ ಭೂಪರಿವರ್ತನೆಯನ್ನು ತಹಶೀಲ್ದಾರ್ ರವರ ಹಂತದಲ್ಲಿ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದೆ.</li><li>ಕಂದಾಯ ಇಲಾಖೆಯಲ್ಲಿ ಭೂಪರಿವರ್ತನೆ 11ಇ ಪ್ರಕರಣಗಳನ್ನು ಕಾಲಮಿತಿಯಲ್ಲಿ ವಿಲೇವಾರಿಗೊಳಿಸಲಾಗುತ್ತಿದ್ದು, ಪ್ರಸ್ತುತ ಇವುಗಳನ್ನು ಹೊರತುಪಡಿಸಿ ಪಹಣಿ ತಿದ್ದುಪಡಿಗಳು, 1-5 ಭೂಮಂಜೂರಾತಿ ಪ್ರಕರಣಗಳು ಬಾಕಿ ಇದ್ದು, ಇವುಗಳ ಪೈಕಿ ಹಿಲ್ ಬ್ಲಾಕ್ ಪ್ರಕರಣಗಳು, ಆಕಾರ್ ಬಂದ್‌ಗಿಂತ ಆರ್.ಟಿ.ಸಿ. ವಿಸ್ತೀರ್ಣ ಜಾಸ್ತಿ ಇರುವ ಪ್ರಕರಣ, ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿಯಾದ ಪ್ರಕರಣಗಳಲ್ಲಿ ಆಕಾರ್ ಬಂದ್ ವಿಸ್ತೀರ್ಣಕ್ಕಿಂತ ಹೆಚ್ಚಾಗಿ ತೀರ್ಪಾಗಿರುವ ಪ್ರಕರಣಗಳು ಹಾಗೂ ಊಹನಾತ್ಮಕ ಸರ್ವೆ ನಂಬರ್ ಗಳನ್ನು ನೀಡುವುದರ ಪರಿಣಾಮ ಪ್ರಕರಣಗಳು ಸಕಾಲದಲ್ಲಿ</li></ul></td></tr>
</table>

| | | |
|---|---|---|
| | ಪರಿಹರಿಸಲು ಸರಕಾರದ ಕ್ರಮಗಳೇನು? ವಿವರ ನೀಡುವುದು | ವಿಲೇವಾರಿಯಾಗದೆ ಬಾಕಿ ಇರುತ್ತದೆ.<br>• ಭೂಪರಿವರ್ತನೆಗೆ ಅಫಿದಾವಿತ್ ಆಧಾರಿತ ತಂತ್ರಾಂಶದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಲ್‌ಜಿಪಿ 2020(ಇ), ದಿನಾಂಕ:21.09.2020 ರಲ್ಲಿನ ಮಾನದಂಡಗಳ ಅನುಸಾರ ಭೂಪರಿವರ್ತನೆಗೆ ಕ್ರಮವಹಿಸಲಾಗುತ್ತಿದೆ ಹಾಗೂ ಪಹಣಿಯಲ್ಲಿ ಇಂಡೀಕರಿಸಲಾಗುತ್ತಿದೆ.<br>• ಭೂ ಪರಿವರ್ತನೆಯಲ್ಲಿ ಪ್ರಮುಖ ವಸತಿ, ವಾಣಿಜ್ಯ, ಕೈಗಾರಿಕೆ ವಿಧಗಳಿರುತ್ತದೆ.<br>• ಉಡುಪಿ ಜಿಲ್ಲೆಯಲ್ಲಿ ರಸ್ತೆ ಅಂಚಿನ ಪಟ್ಟಾ ಜಮೀನುಗಳನ್ನು ಷರತ್ತು ವಿಧಿಸಿ ಭೂಪರಿವರ್ತನೆಗೊಳಿಸಲಾಗುತ್ತಿದೆ. |
| (ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಗೋಮಾಳ ಭೂಮಿಯೆಷ್ಟು ಅದರಲ್ಲಿ ಅತಿಕ್ರಮಣ & ಇತರ ಉದ್ದೇಶಕ್ಕೆ ಬಳಸಿದೆಷ್ಟು ಮತ್ತು ಅದಕ್ಕೆ ಅವಕಾಶವಿದೆಯೇ ಪ್ರಸ್ತುತ ನಿಜವಾಗಿ ಎಷ್ಟು ಜಾಗ ಉಳಿದಿದೆ ವಿವರ ನೀಡುವುದು. | ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಒಟ್ಟು ಗೋಮಾಳ, ಅತಿಕ್ರಮಣ ಮತ್ತು ಉಳಿಕೆ ವಿಸ್ತೀರ್ಣ ಈ ಕೆಳಕಂಡಂತಿವೆ:-<br><table><tr><th>ಜಿಲ್ಲೆ</th><th>ಒಟ್ಟು ವಿಸ್ತೀರ್ಣ</th><th>ಅತಿಕ್ರಮಣ ವಿಸ್ತೀರ್ಣ</th><th>ಉಳಿಕೆ ವಿಸ್ತೀರ್ಣ</th></tr><tr><td>ದಕ್ಷಿಣ ಕನ್ನಡ</td><td>5628.3961</td><td>1264.4486</td><td>4363.9475</td></tr><tr><td>ಉಡುಪಿ</td><td>3843.91</td><td>-</td><td>3843.91</td></tr></table>ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(4) ರಡಿ ಕಲ್ಪಿಸಲಾದ ಅವಕಾಶದಂತೆ ನಿಯಮಾನುಸಾರ ಗೋಮಾಳ ಶೀರ್ಷಿಕೆಯಿಂದ ವಿರಹಿತಪಡಿಸಿ ಕ್ರಮವಹಿಸಲು ಪರಿಶೀಲಿಸಬಹುದಾಗಿದೆ. |
| (ಉ) | ಫಾರ್ಮ್ ಹೌಸ್ ಪ್ರಮಾಣವು ಪತ್ರ ಕೇವಲ ತಾತ್ಕಾಲಿಕ ಕೃಷಿ ಸಂಬಂಧಿತ ಚಟುವಟಿಕೆ ನಡೆಸಲು ಮಾತ್ರವಿದ್ದು, ಕಟ್ಟಡ ಸಂಖ್ಯೆ ನೀಡಲು ಅವಕಾಶವಿಲ್ಲ ಎಂದಿದ್ದು ಸದರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಬೇಕಾಗಿದ್ದಲ್ಲಿ ಸದರಿ ಕಟ್ಟಡಕ್ಕೆ ನಮೂನೆ 9 & 11 ಅಥವಾ ಕಟ್ಟಡ ಸಂಖ್ಯೆ ಇರುವುದು ಅಗತ್ಯ ಇದ್ದು ಕೃಷಿಕರಿಗೆ ಸಮಸ್ಯೆ ಸೃಷ್ಟಿಸಿರುವುದು ಸರಕಾರ ಗಮನಿಸಿದೆಯೇ? (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 11 ಎಲ್‌ಜಿಪಿ 2018 ದಿನಾಂಕ:29.01.2018 ರಂತೆ ಕೃಷಿ ಭೂಮಿಯ ಒಟ್ಟು ವಿಸ್ತೀರ್ಣದ ಶೇಕಡ 10 ರಷ್ಟು ಮೀರದ ಜಮೀನಿನಲ್ಲಿ ಫಾರ್ಮ್ ಹೌಸ್ ಕಟ್ಟಲು ಅವಕಾಶ ಕಲ್ಪಿಸಲಾಗಿದ್ದು, ಪ್ರಸ್ತಾಪಿತ ಫಾರ್ಮ್ ಹೌಸ್‌ನ ಭಾಗದ ಆಸ್ತಿಯನ್ನು ಯಾವುದೇ ವ್ಯವಹಾರ ಅಥವಾ ಮಾರಾಟ ಮಾಡಬೇಕಾದ ಸಂದರ್ಭದಲ್ಲಿ ಅಥವಾ ಗ್ರಾಮ ಪಂಚಾಯಿತಿ/ಮುನಿಸಿಪಲ್ ಆಸ್ತಿ ಸಂಖ್ಯೆಯನ್ನು ನೀಡಬೇಕಾದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 95 ರಡಿ ಭೂ ಪರಿವರ್ತನೆ ಕಡ್ಡಾಯವಾಗಿರುತ್ತದೆ. |

(ಕಡತ ಸಂಖ್ಯೆ:ಕಂಇ 57 ಎಲ್‌ಜಿಎ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು